# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 227 (242)

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 09.12.2025.

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ವಿಶ್ವ ವಿಖ್ಯಾತ ಲಾಲ್ ಬಾಗ್ ಹಾಗೂ ಕಬ್ಬನ್ ಉದ್ಯಾನವನಗಳನ್ನು ತೋಟಗಾರಿಕೆ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿದೆಯೇ; ಮಾಡುತ್ತಿದ್ದಲ್ಲಿ, ಈ ಉದ್ಯಾನವನಗಳ ನಿರ್ವಹಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಹೌದು, ವಿಶ್ವ ವಿಖ್ಯಾತ ಲಾಲ್ ಬಾಗ್ ಹಾಗೂ ಕಬ್ಬನ್ ಉದ್ಯಾನವನಗಳನ್ನು ತೋಟಗಾರಿಕೆ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿದೆ.<br>ಈ ಉದ್ಯಾನವನಗಳ ನಿರ್ವಹಣೆಗೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಲಾಲ್ ಬಾಗ್ ನಲ್ಲಿರುವ 3000ಕ್ಕೂ ಹೆಚ್ಚು ಮತ್ತು ಕಬ್ಬನ್ ಉದ್ಯನವನದಲ್ಲಿರುವ ದೇಶ-ವಿದೇಶದ ಅಮೂಲ್ಯ ಸಸ್ಯ ಪ್ರಬೇಧಗಳನ್ನು ಸಮರ್ಪಕವಾಗಿ ನಿರ್ವಹಿಸಿ ಸಂರಕ್ಷಿಸಲಾಗುತ್ತಿದೆ.<br>2. ಅಪರೂಪದ ಅಳುವಿನಂಚಿನಲ್ಲಿರುವ ಮತ್ತು ವಿನಾಶದಂಚಿನಲ್ಲಿರುವ ಸಸ್ಯ ಪ್ರಬೇಧಗಳಿಗೆ ವಿಶೇಷ ಒತ್ತು ನೀಡಿ ಅಂತಹ ಸಸ್ಯ ಪ್ರಬೇಧಗಳನ್ನು ಗುರುತಿಸಿ ಲಾಲ್ ಬಾಗ್ ಸಸ್ಯ ತೋಟಕ್ಕೆ ಪರಿಚಯಿಸುವುದು ಮತ್ತು ಅವುಗಳನ್ನು ಸಂರಕ್ಷಣೆ ಮಾಡಿ ನಂತರದ ದಿನಗಳಲ್ಲಿ ಅವುಗಳ ಸಸ್ಯಾಭಿವೃದ್ಧಿ ಮಾಡಿ ಬೇರೆ ಪ್ರದೇಶಕ್ಕೆ ವಿಸ್ತರಣೆ ಮಾಡಲಾಗುತ್ತಿದೆ.<br>3. ಕಾಲ-ಕಾಲಕ್ಕೆ ದೇಶ-ವಿದೇಶದ ಹೊಸ ಸಸ್ಯ ಪ್ರಬೇಧಗಳನ್ನು ಪರಿಚಯಿಸಲಾಗುತ್ತಿದೆ.<br>4. ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳಲ್ಲಿ ಅಭಿವೃದ್ಧಿಯಾಗದ ಪ್ರದೇಶಗಳನ್ನು ಹಂತ-ಹಂತವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.<br>5. ಲಾಲ್ ಬಾಗ್ ಸಸ್ಯ ತೋಟದ ಜೋಡಿ ರಸ್ತೆ ಬಳಿ ಇರುವ ವಾಹನ ನಿಲುಗಡೆ ಪ್ರದೇಶಕ್ಕೆ ವಾಹನ ನಿಲುಗಡೆಯನ್ನು ಮಾತ್ರ ಸೀಮಿತಗೊಳಿಸಿ, ವಾಹನ ಸಂಚಾರವನ್ನು ಸಸ್ಯ ತೋಟದ ಒಳಾಂಗಣದಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.<br>6. ಲಾಲ್ ಬಾಗ್ ಸಸ್ಯ ತೋಟಕ್ಕೆ ಪ್ಲಾಸ್ಟಿಕ್ ತರುವುದನ್ನು ನಿಷೇಧಿಸಲಾಗಿದೆ. ಒಟ್ಟಾರೆ ಲಾಲ್ ಬಾಗ್ ಸಸ್ಯ ತೋಟದ ಒಳಾಂಗಣದಲ್ಲಿ ಪ್ಲಾಸ್ಟಿಕ್ ಮುಕ್ತವಾಗಿದ್ದು, ವಾಹನ ಮುಕ್ತವನ್ನಾಗಿಸಿ ಪರಿಸರ ಸ್ನೇಹಿ ವಾತಾವರಣವನ್ನು ಉಂಟು ಮಾಡಲಾಗಿದೆ. ಹಾಗೇಯೇ ಪ್ರವಾಸಿಗರ ಅನುಕೂಲಕ್ಕಾಗಿ ಬ್ಯಾಟರಿ ಚಾಲಿತ ಬಗ್ಗಿಗಳನ್ನು ಬಳಸಲಾಗುತ್ತಿದೆ ಮತ್ತು ಲಾಲ್ |

ಬಾಗ್ ಒಳಾಂಗಣದ ಉಸ್ತುವಾರಿ ನಿರ್ವಹಣೆಯ ಸಿಬ್ಬಂದಿಗಳು ಬೈಸಿಕಲ್ ಗಳನ್ನು ಬಳಸಿ ನಿರ್ವಹಣೆಯನ್ನು ಕೈಗೊಳ್ಳುತ್ತಿದ್ದಾರೆ.

7. ಲಾಲ್ ಬಾಗ್ ಕೆರೆಗೆ ಕಲುಷಿತ ನೀರು ಹರಿಯುವುದನ್ನು ಸಂಪೂರ್ಣವಾಗಿ ನಿರ್ಭಂಧಿಸಲಾಗಿರುತ್ತದೆ. ಲಾಲ್ ಬಾಗ್ ಕೆರೆಯ ಬಳಿ ಬೃಹತ್ ಜಲಪಾತವನ್ನು ನಿರ್ಮಿಸಿದ್ದು Green technology ತಂತ್ರಜ್ಞಾನದಡಿ ನೀರಿನ ಗುಣಮಟ್ಟ ವೃದ್ಧಿಗೆ ಕ್ರಮವಹಿಸಲಾಗಿದೆ.
8. ಲಾಲ್ ಬಾಗ್ ಸಸ್ಯ ತೋಟಕ್ಕೆ ಭೇಟಿ ನೀಡುವ ಸಾರ್ವಜನಿಕರು, ಪ್ರವಾಸಿಗರು ಮತ್ತು ವಾಯು ವಿಹಾರಿಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಆದ್ಯತೆಯನ್ನು ನೀಡಲಾಗಿದೆ.
9. ಲಾಲ್ ಬಾಗ್ ಸಸ್ಯತೋಟದ ಒಳಾಂಗಣದಲ್ಲಿ ಹಾಲಿ ಇದ್ದ ಆರು ಶೌಚಾಲಯಗಳ ಜೊತೆಗೆ ಮೂರು ಹೆಚ್ಚುವರಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಕಬ್ಬನ್ ಉದ್ಯಾನವನದಲ್ಲಿ 02 ಶೌಚಾಲಯಗಳಿದ್ದು ಹೆಚ್ಚುವರಿಯಾಗಿ 03 ಶೌಚಾಲಯಗಳನ್ನು ನಿರ್ಮಿಸಲಾಗಿದೆ.
10. ಹೊಸದಾಗಿ R.O. ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲಾಗಿರುತ್ತದೆ.
11. ಲಾಲ್ ಬಾಗ್ ಸಸ್ಯ ತೋಟ ಹಾಗೂ ಕಬ್ಬನ್ ಉದ್ಯಾನವನ ಗಳ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಅವಶ್ಯ ಡಸ್ಟಬಿನ್ ಗಳನ್ನು ಅಳವಡಿಸಲಾಗಿದೆ.
12. ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನದ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಅನುಕೂಲವಾಗುವ ರೀತಿ ಸುಮಾರು 200 ಕ್ಕೂ ಹೆಚ್ಚು ಕೂರುವ ಬೆಂಚುಗಳನ್ನು ಅಳವಡಿಸಲಾಗಿದೆ.
13. ಲಾಲ್ ಬಾಗ್ ಸುತ್ತಳತೆಯಲ್ಲಿ 5.5 ಕಿ.ಮೀ. ಉದ್ದದ ಪರಿಸರ ಸ್ನೇಹಿ ವಾಕಿಂಗ್ ಪಾಥ್ ಅನ್ನು ನಿರ್ಮಿಸಲಾಗಿದೆ, ಅದೇ ರೀತಿ ಕಬ್ಬನ್ ಉದ್ಯಾನವನದ ಪರಿದಿಯಲ್ಲಿ 5 ಕಿ.ಮೀ. ಉದ್ದದ ವಾಕಿಂಗ್ ಪಾಥ್ ವೇ ಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.
14. ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳಲ್ಲಿ ಭದ್ರತಾ ಸೇವೆ, ಸ್ವಚ್ಛತಾ ಕಾರ್ಯ, ನೀರು ಮತ್ತು ವಿದ್ಯುತ್ ನಿರ್ವಹಣಾ ಕಾರ್ಯಗಳನ್ನು ಕಾಲ-ಕಾಲಕ್ಕೆ ಕೈಗೊಳ್ಳಲಾಗುತ್ತಿದೆ.

(ಆ) ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಕೆಳಗಿನಂತಿದೆ.

| **ಕ್ರಮ ಸಂ.** | **ಆರ್ಥಿಕ ವರ್ಷ** | **ಲಾಲ್ ಬಾಗ್ ಸಸ್ಯ ತೋಟ (ರೂ. ಲಕ್ಷಗಳಲ್ಲಿ)** | **ಕಬ್ಬನ್ ಉದ್ಯಾನವನ (ರೂ. ಲಕ್ಷಗಳಲ್ಲಿ)** |
|---|---|---|---|
| 1 | 2023- | 256.00 | 360.00 |

| | | | |
|---|---|---|---|
| | 24 | | |
| 2 | 2024-25 | 251.64 | 323.00 |
| ಒಟ್ಟು | | **507.64** | **683.00** |

<table>
<tr><td>(ಇ)</td><td>ಖಾಸಗಿ ನ್ಯೂಸ್ ಚಾನಲ್ ನಲ್ಲಿ ಪ್ರಸಾರವಾಗಿರುವ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದು ಮತ್ತು ಪಾದಾಚಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮವೇನು;</td><td>ಹೌದು ಗಮನಕ್ಕೆ ಬಂದಿರುತ್ತದೆ. ಈ ಸಂಬಂದ ಕೈಗೊಂಡಿರುವ ಕ್ರಮಗಳು ಕೆಳಕಂಡಂತಿರುತ್ತವೆ.<br>ಲಾಲ್ ಬಾಗ್ ಸಸ್ಯ ತೋಟ:<br>1. ನಾಯಿಗಳ ನಿಯಂತ್ರಣಕ್ಕಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಶುವೈದ್ಯ ಇಲಾಖೆಯಿಂದ ಸಂತಾನಹರಣ ಶಸ್ತ್ರ ಚಿಕಿತ್ಸೆ (ಎಬಿಸಿ)ಯನ್ನು ಕಾಲ-ಕಾಲಕ್ಕೆ ಕೈಗೊಳ್ಳಲಾಗುತ್ತಿದೆ.<br>2. ರೇಬೀಸ್ ರೋಗದ ವಿರುದ್ಧ ಲಸಿಕೆಯನ್ನು (ಎಆರ್‌ವಿ) ಹಾಕಲಾಗಿರುತ್ತದೆ.<br>3. ಅಗ್ರೆಸೀವ್ ಇರುವ ನಾಯಿಗಳನ್ನು ಗುರುತಿಸಿ ಅವುಗಳಿಗೆ ಆ್ಯಂಟಿ ಅಗ್ರೆಸೀವ್ ಮಾತ್ರೆಗಳನ್ನು ನೀಡಲಾಗಿರುತ್ತದೆ.<br>4. ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ದಿನಾಂಕ:8-10-2025 ರಂದು ಹಾಗೂ ದಿನಾಂಕ: 30-10-2025 ರಂದು ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದ ಆವರಣದಲ್ಲಿರುವ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಕೋರಲಾಗಿದೆ.<br>ಕಬ್ಬನ್ ಉದ್ಯಾನವನ:<br>1. ಕಬ್ಬನ್ ಉದ್ಯಾನವನದಲ್ಲಿ ಬೀದಿ ನಾಯಿಗಳಿಗೆ ಆಹಾರ ಹಾಕಲು ಉದ್ಯಾನವನದ ಆವರಣದಲ್ಲಿ ನಿರ್ಧಿಷ್ಟ ಸ್ಥಳಗಳನ್ನು ಗುರುತಿಸಲಾಗಿದ್ದು, ಆ ಸ್ಥಳಗಳಲ್ಲಿ ನಾಮಫಲಕಗಳನ್ನು ಅಳವಡಿಸಲಾಗಿದೆ.<br>2. ಅಂತಹ ಸ್ಥಳಗಳಲ್ಲಿ ಮಾತ್ರ ಆಹಾರ ಹಾಕಲು ಅವಕಾಶ ನೀಡಿ ಈ ಸಂಬಂಧ ಭದ್ರತಾ ಸಿಬ್ಬಂದಿಗಳು ಮತ್ತು ಕ್ಷೇತ್ರಾಧಿಕಾರಿಗಳ ಉಸ್ತುವಾರಿಯಲ್ಲಿ ಮೇಲ್ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದೆ.<br>3. ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೀದಿ ನಾಯಿಗಳಿಗೆ ಲಸಿಕೆ ಹಾಕುವುದು ಆರೋಗ್ಯ ಇತ್ಯಾದಿಗಳ ಸಂಬಂಧವಾಗಿ ಸಂಬಂಧಿಸಿದ GBA ವ್ಯಾಪ್ತಿಯ ಪಶುವೈದ್ಯಾಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮವನ್ನು ವಹಿಸುತ್ತಿದ್ದಾರೆ.</td></tr>
<tr><td>(ಈ)</td><td>ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳ ಅಭಿವೃದ್ಧಿಗಾಗಿ ನಡೆದ ಕಾಮಗಾರಿಗಳಾವವು? (ವಿವರವನ್ನು ನೀಡುವುದು)</td><td>ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳ ಅಭಿವೃದ್ಧಿಗಾಗಿ ಕೈಗೊಂಡ ತೋಟಗಾರಿಕೆ ಕಾಮಗಾರಿಗಳು ಈ ಕೆಳಕಂಡಂತಿವೆ:-<br>ಲಾಲ್ ಬಾಗ್ ಸಸ್ಯ ತೋಟ:<br>1. ಲಾಲ್ ಬಾಗ್ ಸಸ್ಯ ತೋಟದಲ್ಲಿ ಹಿಂದೆ ಇದ್ದಂತಹ ಬೋನ್ಸಾಯ್ ಉದ್ಯಾನವನಕ್ಕೆ ಪುನರುಜ್ಜೀವನ ನೀಡಿ , ಅದನ್ನು ವಿಸ್ತರಿಸಿ, ಅಭಿವೃದ್ಧಿ ಪಡಿಸಿ ಅದಕ್ಕೆ ಹೊಸ ನವೀನ ಮಾದರಿಯ ಸ್ವರೂಪವನ್ನು ನೀಡಲಾಗಿದೆ.<br>2. ಲಾಲ್ ಬಾಗ್ ನಲ್ಲಿ ಸುಮಾರು 200 ವರ್ಷಕ್ಕೂ ಹಳೆಯದಾಗಿದ್ದಂತಹ ಮೌಲ್ಯಾಧಾರಿತ ಮರಗಳನ್ನು</td></tr>
</table>

ಬಳಸಿಕೊಂಡು ರಾಷ್ಟ್ರೀಯ ಮರಕೆತ್ತನೆ ಶಿಬಿರವನ್ನು ಮಾಡಿ ಅದರಿಂದ Wood carving ಮುಖೇನ ಕಾಸ್ಟಶಿಲ್ಪಗಳನ್ನು ಮಾಡಿ ಲಾಲ್ ಬಾಗ್ ಗಾಜಿನ ಮನೆಯ ಹಿಂಭಾಗ ಪ್ರದೇಶದಲ್ಲಿ ಒಂದು ಓಪನ್ ಏರ್ ಮುಸಿಯಂ ಅನ್ನು ಸ್ಥಾಪನೆ ಮಾಡಲಾಗಿದೆ.

3. ಲಾಲ್ ಬಾಗ್ ಬಂಡೆಯ ಹಿಂದಿನ ಪ್ರದೇಶ ಸುಮಾರು ನೂರು ವರ್ಷಗಳಿಂದ ಅಭಿವೃದ್ಧಿ ಕಾಣದ ಪ್ರದೇಶವಾಗಿದ್ದು, ಪ್ರಸ್ತುತ ಆ ಒಂದು ಪ್ರದೇಶದಲ್ಲಿ ಸುಮಾರು 180 ಕ್ಕೂ ಹೆಚ್ಚು ಅಳಿವಿನಂಚಿನಲ್ಲಿರುವ ಅಪರೂಪದ ಹಾಗೂ ವಿನಾಶದಂಚಿನಲ್ಲಿರುವ ಪಶ್ಚಿಮ ಘಟ್ಟದ ಸಸ್ಯ ಪ್ರಬೇಧಗಳನ್ನು ಪರಿಚಯಿಸಿ ಸಂರಕ್ಷಿಸಲಾಗುತ್ತಿದೆ.
4. ಲಾಲ್ ಬಾಗ್ ಸಸ್ಯತೋಟದಲ್ಲಿ ವರ್ಷಕ್ಕೆ ಎರಡು ಬಾರಿ ಅತ್ಯಾರ್ಷಕ ಫಲ-ಪುಷ್ಪ ಪ್ರದರ್ಶನಗಳನ್ನು ಆಯೋಜಿಸಲಾಗುತ್ತಿದೆ.
5. ಪ್ರತಿ ವರ್ಷ ಮಾವು ಬೆಳೆಗಾರ ರೈತರಿಗೆ ಸಹಾಯಕಾರಿಯಾಗುವಂತೆ ಮಾವು ಮೇಳವನ್ನು ಆಯೋಜಿಸಲಾಗುತ್ತದೆ.
6. ಲಾಲ್ ಬಾಗ್ ಸಸ್ಯತೋಟದ ಹೃದಯ ಭಾಗದಲ್ಲಿ 3 ಆಕರ್ಷಕ ನೆರಳು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.
7. ರಾಷ್ಟ್ರೀಯ ಗ್ರಂಥಾಲಯ ಕಸ್ಟಡಿಯನ್ನು ಪುನರುಜ್ಜೀವನಗೊಳಿಸಿ ಸಂಗ್ರಹಿಸಲಾಗಿರುತ್ತದೆ.
8. ಲಾಲ್ ಬಾಗ್ ಧನ್ವಂತರಿ ವನದಲ್ಲಿ ಆಕ್ವಾಟಿಕ್ ಗಾರ್ಡನ್ ಅನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

**<u>ಕಬ್ಬನ್ ಉದ್ಯಾನವನ:</u>**

1. ಕಬ್ಬನ್ ಉದ್ಯಾನವನದ ಒಳಾಂಗಣದ ಎಲ್ಲಾ ರಸ್ತೆಗಳು Foot path ಗಳನ್ನು ಹೊಸದಾಗಿ ನಿರ್ಮಿಸಲಾಗಿದೆ.
2. ಕಬ್ಬನ್ ಉದ್ಯಾನವನದ ಸೆಂಟ್ರಲ್ ಲೈಬ್ರರಿಯ ಮುಂಭಾಗದಲ್ಲಿ ಆಕರ್ಷಕ ಗುಲಾಬಿವನವನ್ನು ಅಭಿವೃದ್ಧಿಪಡಿಸಲಾಗಿದೆ.
3. ಕಬ್ಬನ್ ಉದ್ಯಾನವನದ ಸುತ್ತಳತೆಯಲ್ಲಿ ರಕ್ಷಣಾ ಗ್ರಿಲ್ ಅನ್ನು ಅಳವಡಿಸಲಾಗಿದೆ.
4. ಕಬ್ಬನ್ ಉದ್ಯಾನವನದ ಒಳಾಂಗಣದಲ್ಲಿನ 02 ನೀರಿನ ಕೊಳಗಳನ್ನು ಅಭಿವೃದ್ಧಿಪಡಿಸಲಾಗಿದೆ.
5. ಕಬ್ಬನ್ ಉದ್ಯಾನವನದಲ್ಲಿ ಕಳೆ ಗಿಡಗಳನ್ನು ತೆರವುಗೊಳಿಸಿ, ನೆರಳು ಹುಲ್ಲು ಹಾಸನ್ನು ಅಭಿವೃದ್ಧಿಪಡಿಸಲಾಗಿದೆ.
6. ಕಬ್ಬನ್ ಉದ್ಯಾನವನದ ಹೈಕೋರ್ಟ್ ಹಾಗೂ ಹಡ್ಸನ್ ವೃತ್ತಗಳಲ್ಲಿ ಆಕರ್ಷಕ ಕಮಾನು ಹಾಗೂ ಗೇಟುಗಳನ್ನು ನಿರ್ಮಿಸಲಾಗಿರುತ್ತದೆ.
7. ಹೊಸದಾಗಿ 250 ಕ್ಕೂ ಹೆಚ್ಚು ಪ್ಲೂಮೇರಿಯಾ (Plumeria) ಸಸ್ಯ ಪ್ರಬೇಧಗಳನ್ನು ಪರಿಚಯಿಸಲಾಗಿದೆ.
8. ಐತಿಹಾಸಿಕ ಬ್ಯಾಂಡ್ ಸ್ಟ್ಯಾಂಡ್ ಅನ್ನು ನವೀಕರಿಸಲಾಗಿರುತ್ತದೆ.

| | | |
|---|---|---|
| | | **9.** ಹೊಸದಾಗಿ 02 ಕುಡಿಯುವ R.O ನೀರಿನ ಘಟಕಗಳನ್ನು ನಿರ್ಮಿಸಲಾಗಿರುತ್ತದೆ.<br>**10.** ಉದ್ಯಾನವನದ ಪ್ರವೇಶ ದ್ವಾರ ಮತ್ತು ಒಳಾಂಗಣದಲ್ಲಿ ಅವಶ್ಯ ಮಾಹಿತಿ ಮತ್ತು ಮಾರ್ಗಸೂಚಿ ಫಲಕಗಳನ್ನು ಅಳವಡಿಸಲಾಗಿರುತ್ತದೆ. |

**ಸಂಖ್ಯೆ: HORTI 517 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**